


ಅವಘಡಕ್ಕೆ ಭೀತರಾಗಿ ಹೊತ್ತಿಗೆ ಮುಂಚೇ ರಜೆ ಕೊಟ್ಟು ಮಕ್ಕಳನ್ನು ಮನೆಗೆ ಕಳಿಸಿ ಬಿಟ್ಟಿದ್ರು.

'ಅಯ್ಯೊಪ್ಪ ಎಂಥಾ ಗಾಳಿ! ಇಂಥ ಗಾಳಿಗೆ ಎಲ್ಲೋ ಎತ್ತರದ ಮರ ಉರುಳಿ ಈ ರಾತ್ರಿ ಕರೆಂಟ ಹೋಗುದು ಗ್ಯಾರಂಟಿ' ಅಂತ ಅಪ್ಪ ಅಜ್ಜಿ ಮಾತಾಡಿಕೊಂಡರು. 'ಬೇಸಿಗೇಲಿ ಸಾರಿಸಿದ ನಿಂಪು ಅಂಗಳ ಈ ಮಳೆಗೆ ಬಾದಾಗೇ ಹೋಯ್ತು' ಅಂತ ಅಜ್ಜಿ ಅಪ್ಪನೊಡನೆ ಮಳೆ ಇರುದ್ಧ ಸಣ್ಣ ದೂರು ಕೊಟ್ಟು 'ಎಲ್ಲರ ಮನೆ ಅಂಗಳಕ್ಕಾದ ಗತಿ ನಮ್ಮನೆ ಅಂಗಳಕ್ಕೂ ಆಗ್ತದೆ, ಅದಕ್ಯಾಕೆ ಚಿಂತೆ ಮಾಡ್ತೀ' ಅಂತ ಅಪ್ಪ ಮುಂಬಾಗಿಲಿನುದ್ದಕ್ಕೂ ಇಳಿಬಿಟ್ಟಂತೆ ಒಂದು ದೊಡ್ಡ ಪ್ಲಾಸ್ಟಿಕ್ಕಿನ ಹಾಳೆ ಸಿಕ್ಕಿಸಿದರು.

'ಬಾವಿಗೂ ಒಂದು ಹಾಳೆ ಹೊದಿಸಬೇಕಿತ್ತು, ಮರದ ಎಲೆಯೆಲ್ಲ ಬಿದ್ದು ಕಸ ಕೊಳೀತದೆ, ಇಂದು ಮಿಂದು ಮಡಿನೀರಿಗೆ ಹೋದಾಗ ಬಾವೀಲಿದ್ದ ಕಪ್ಪೆ ತಿನ್ನಲು ಬಂದ ಒಂದು ದೊಡ್ಡ ಕೆರೆ ಹಾವನ್ನೂ ಕಂಡೆ' ಅನ್ನುತ್ತ ಚಿಮಣಿಯ ಬತ್ತಿ ಎಳೆದು ಅಜ್ಜಿ ಕುಡಿ ತೆಗೆಯುತ್ತಿದ್ದಳು. ನಡುಕೋಣೆಯ ಮೂಲೆಲಿ ಟಪ್ ಟಪ್ ಹನಿ ಉದುರತೊಡಗಿದ್ದೇ ಅಪ್ಪ ಅಲ್ಲೊಂದು ಪಾತ್ರೆ ತಂದಿಟ್ಟರು, 'ಮಂಗ ಕುಣಿದು ಒಡೆದ ಹೆಂಚು ಹೊದ್ದಿಸಲು ಮರೆತಿದ್ದಿ ನೀನು' ಅಂತ ಅಜ್ಜಿ ಮತ್ತೊಮ್ಮೆ ಅಪ್ಪನನ್ನೇ ದೂರಿದಳು.

ಅಣ್ಣ ಮತ್ತು ನಾನು ಶಾಲೆ ಅಭ್ಯಾಸ ಮಾಡ್ತಾ ಹೊರಕೋಣೆ ಜಗಲಿ ಮೇಲೆ ಕೂತಿದ್ದೆವು. ಅರ್ಧ ಗೋಡೆ ಅರ್ಧ ಕಟಾಂಜನವಿದ್ದ ಹೊರಕೋಣೇಲಿ ಗಾಳಿಗೆ ಹಾರಿ ಒಳಬಂದ ಮಳೇ ಹನಿಗಳು ಚಳಿ ಹುಟ್ಟಿಸ್ತಾ ಇದ್ವು. ಮಳೆಯ ರಭಸ ಕ್ಷಣಕ್ಷಣಕ್ಕೂ ಜೋರೇ ಆಗ್ತಿತ್ತು. ಗುಡ್ಗು ಮಿಂಚಿನ ಸದ್ದಿಗೆ ಆತಂಕಗೊಳ್ತಾ ಇದ್ದ ನಾನು ಆಗಾಗ ಎದುರಲ್ಲೇ ತಲೆ ತಗ್ಗಿಸಿ ಏನೋ ಬರೀತಾ ಕೂತ್ಕೊಂಡ ಅಣ್ಣನ ಮುಖ ನೋಡ್ತಿದ್ದೆ. ಆಗ್ಲೇ ಫಟ್ಟನೆ ಕರೆಂಟ್ ಹೋಗಿಬಿಟ್ಟು. ಎಲ್ಲಾ ಕಡೆನೂ ಗಾಢಾಂಧಕಾರ, ಇಡೀ ಮನೆಯಷ್ಟೇ ಅಲ್ಲ ಊರಿಗೆ ಊರೇ ಕರಗತ್ಲೆ ಹಾಗೂ ಮಳೇಲಿ ಮೀಯ್ತಾ ಇರೂವಂಗೆ ಕಾಣ್ತಿತ್ತು.

ಸೀಮೆಣ್ಣೆ ಚಿಮ್ಣಿ ತಂದು ಬೆಳಗಿಸಿದ ಅಣ್ಣ ನಾವು ಹಾಸ್ಕೊಂಡು ಕೂತ ಚಾಪೆ ಮಧ್ಯೆ ತಂದಿರಿಸಿದ. ಈಗ ಚಾಪೆ ಮೇಲೆ ಕೂತ ನಮ್ಮಿಬ್ಬರ ಪಟ್ಟಿ ಪುಸ್ತಕದ ಮೇಲಷ್ಟೇ ಚಿಮ್ಣಿಯ ಮಂದ ಬೆಳ್ಳು ಹರಡಿ ನಿಂತಿತ್ತು. ಅಜ್ಜಿಯೂ ಹೂಬತ್ತಿ ಹೊಸೀತಾ ಅಲ್ಲೇ ನಮ್ಮ ಬಳಿಯೇ ಬಂದು ಕೂತಿದ್ಲು. ಗದ್ದೆಯ ಬದುವಿಗೆ ಜಡ್ಡೀ ಮಣ್ಣು ಏರ್ಸಿ ಸುಸ್ತಾಗಿ ಬಂದ ಅಪ್ಪ ಆರಾಮ ಕುರ್ಚಿಲಿ ಕೂತ್ಕೊಂಡು ದಣಿವಾರಿಸಿಕೊಳ್ಳುತ್ತಿದ್ರು. ಅಮ್ಮ ಅಡ್ಗೆ ಮನೇಲಿ ಇನ್ನೊಂದು ಚಿಮ್ಣಿ ಹೊತ್ತಿಸಿಕೊಂಡು ದೋಸೆಗೆ ರುಬ್ಬತಾ ಇದ್ಲು.

ಇದ್ದಕ್ಕಿದ್ದಂತೆ ಪಕ್ಕ ಕೂತ ಅಜ್ಜಿ 'ಅಯ್ಯೋ ಏನೋ ತಣ್ಣಗೆ ಕೈಗೆ ಹತ್ತಿದ ಹಾಗಾಯ್ತು, ಏನೇ ತಂಗೀ, ಆಗಲೇ ಮಳೆಯಲ್ಲಿ ಲಂಗ ತೋಯ್ಸಿಕೊಂಡು ಬಂದು ಕೂತಿದ್ದಿಯೇನೇ' ಕೇಳಿದ್ಲು. ನಾನು ಇಲ್ಲಪ್ಪ ಅಂದೆ. 'ನೋಡು ನೋಡು ಇಲ್ಲಿ ನೋಡು' ಅಂತ ತಣ್ಣನೆ ಏನನ್ನೋ ಎತ್ತಿ ಎತ್ತಿ ತೋರ್ಸಿದ್ಲು. ನಾನೂ ಆ ದೀಪದ ಬೆಳಕಲ್ಲಿ ಮೆಲ್ಲಗೆ ಹಿಂದಕ್ಕೆ ತಿರುಗಿ ನಿರುಕಿಸಿದೆ, ಒಂದೇ ಕ್ಷಣ, '...ಅಯ್ಯೋ ಹಾವು...!' ಅಂತ ಚೀರಿಕೊಂಡು ಕೂತಲ್ಲೇ ಹಾರಿಬಿದ್ದಿದ್ದೆ. ಕೆರೆ ಹಾವೊಂದು ಅಜ್ಜಿಯ ಕೈಯಿಂದ ತಪ್ಪಿಕೊಳ್ತಾ ಬಡಿವಾರ ತೋರ್ತಾ ತನ್ನ ಡೊಂಕು ಮೈ ವೈಯಾರದಿಂದ ತಿರುಗಿಸ್ತಾ ಸರಸರನೆ ಅಡುಗೆ ಕೋಣೆಯ ಕಡೆಗೆ ಹೊರಟದ್ದು ಅಣ್ಣನ ಕಣ್ಣಿಗೂ ಬಿತ್ತು.

ನಾನೂ ಅಣ್ಣನೂ ಒಂದೇ ಗುಕ್ಕಿಗೆ ಓಡಿ ಕೋಣೆಯ ಮೂಲೆಗಿರುವ ಏಕಮಾತ್ರ ಮಂಚದ ಮೇಲೆ ಹತ್ತಿ ನಿಂತು ಭಯದಿಂದ ಅತ್ತಿತ್ತ ನೋಡಲಾರಂಭಿಸಿದೆವು, ಎರಡು ಮಾರುದ್ದದ ಆ ದಪ್ಪ ಹಾವು ಕೋಣೆಯ ಕತ್ತಲು ಬೆಳಕಿನ ಆವಾರದಲ್ಲಿ ಹೆಡೆಯೆತ್ತಿ ಚಲಿಸಿದ ಪರಿ ಕಂಡು ಮನಸ್ಸಿನ ಮೂಲೆಯಲ್ಲಿ ವಿಚಿತ್ರ ಅದುರಿಹೋಗಿದ್ದೆವು, ಅಷ್ಟರಲ್ಲೇ ನೆಲದಿಂದ ಎದ್ದ ಅಜ್ಜಿ ಆರಾಮಕುರ್ಚಿಲಿ ಕಾಲುಗಳೆರಡನ್ನೂ ಮೇಲಕ್ಕೆಳೆದು ಮಡಚಿಕೊಂಡು ಕೂತು 'ಅಬ್ಬಾ, ಕೈಯಲ್ಲೇ ಮುಟ್ಟಿದರೂ ಕೆರೆಹಾವು ಅಂತ ಕಾಣಲಿಲ್ಲವಲ್ಲೇ, ಬೆಳಿಗ್ಗೆ ಆ ಬಾವಿಲಿ ಕಂಡದ್ದೇ ಏರಿ ಬಂದು ಒಳ ನುಗ್ಗಿರಬೇಕು' ಅನ್ನುತ್ತ ಸುಧಾರಿಸಿಕೊಳ್ತಾ ಇದ್ಲು.

ಅಮ್ಮ ಕೂತ್ಕೊಂಡು ರುಬ್ತಾ ಇದ್ದ ರುಬ್ಬುಗಲ್ಲಿನ ಸಂದೀಲೇ ಅದು ರ್ರನೆ ನಡೆದದ್ದಕ್ಕೆ, ಎಲ್ಲ ಇದ್ದಲ್ಲೇ ಕೈಬಿಟ್ಟು ಚಿಮಣಿ ಎತ್ತಿಕೊಂಡು ಹಾರಿಕೊಂಡೇ ಈಚೆ ಓಡಿ ಬಂದ್ಲು. ಅಪ್ಪ ಬಾಗಿಲ ಮೂಲೇಗಿರೋ ಒಂದು ಬಡಿಗೆಯಿಂದ ಕೆರೆಹಾವು ಕೂತಲ್ಲಿಗೆ ಬಂದು ಹುಶ್ ಹುಶ್ ಅಂತ ತಿವಿದಾಗಲೂ ಅದು ಜಪ್ಪಯ್ಯ ಅಂದರೂ ಅಲುಗಾಡದೇ ಇದ್ದದ್ದನ್ನು ಕಂಡು 'ಹೊರಗಿನ ಜೊಪ್ಪು ಮಳೆಗೆ ಹೆದರಿ ಒಳ ಬಂದಿದೆ, ಮಳೆ ನಿಂತ ನಂತರ ತಾನೇ ಹೊರ ಹೋಗ್ತದೆ ಬಿಡು' ಅಂತ ಅಷ್ಟೇ ನಿರಾಳವಾಗಿ ಹೇಳಿದರು, ಅಜ್ಜಿ 'ಇಲೀ ಹುಡ್ಕೊಂಡು ಬಂದೀದೋ ಏನೋ ಪಾಪ!' ಅಂದ್ಲು, ಅಮ್ಮಂಗೆ ಸಿಟ್ಟು, 'ಪಾಪ ಅಂತೆ ಪಾಪ, ಅಯ್ಯೋ ಅಯ್ಯೋ ಹಾವನ್ನು ಕಾಲ ಬುಡದಲ್ಲಿ ಇರಿಸಿಕೊಂಡು ನಾನು ದೋಸೆ ಹ್ಯಾಗೆ ರುಬ್ಬಲಿ? ಅದನ್ನು ಈಗಲೇ ಹೊರಕ್ಕೆ ಓಡಿಸಿ, ಮಕ್ಕಳು ಮರಿ ನೋಡಿ ಹೆದರ್ತಾರೆ, ಹೀಗೆ ಸುಮ್ಮನಿದ್ದರೆ ಹ್ಯಾಗೆ, ಈಗ್ಲೇ ಏನಾದರೂ ಮಾಡಿ' ಅಂತ ಅಮ್ಮ ಅಪ್ಪನನ್ನು ಒತ್ತಾಯಿಸಿದಳು.

ಮತ್ತೂ ಮುಂದುವರೆದ ಅಮ್ಮ ಏನೋ ಉಪಾಯ ಹೊಳೆದಂತೆ, ಹೊರಕೋಣೆಯ ಗೋಡೆ ಸ್ಟ್ಯಾಂಡ್‌ನಲ್ಲಿದ್ದ ಸೆಲ್ಲಿನ ರೇಡಿಯೋವನ್ನು ಅಡುಗೆ ಖೋಲಿಗೆ ತಂದು ದೊಡ್ಡ ಸೌಂಡಿಗೆ ತಿರುವಿ ಹಚ್ಚಿಟ್ಟಳು, ಆ ಸದ್ದಿಗಾದರೂ ಅದು ಹೆದರಿ ಹೊರ ಹೋಗಬಹುದು ಎಂಬ ಯೋಚನೆ ಅಮ್ಮನದಾಗಿತ್ತು. ಆಗ ರಾತ್ರಿ ಎಂಟೂವರೆಯಾದದ್ದರಿಂದ ಧಾರವಾಡ ನಿಲಯದಲ್ಲಿ ಕನ್ನಡ ಕಾರ್ಯಕ್ರಮ ಮುಗಿದು ಇಂಗ್ಲೀಷ್ ವಾರ್ತೆ ಬರುತ್ತಿತ್ತು. 'ಕೆರೆ ಹಾವು ಅದನ್ನೇ ಕೇಳ್ತಾ ಅಲ್ಲೇ ಮಲಗಿಬಿಟ್ಟಿದೆ ಅಂತ ಕಾಣ್ತದೆ, ಸ್ವಲ್ಪ ಬಂದು ನೋಡಿರಿಲ್ಲಿ' ಅಂತ ಅಮ್ಮ ಪುನಃ ಅಲವತ್ತುಕೊಂಡಳು.

ಅಪ್ಪ ಒಳ ಬಂದವರು 'ಅದಕ್ಕೆಲ್ಲಿ ಕಿವಿ ಕೇಳ್ತದೆ? ರೇಡಿಯೋ ಅಷ್ಟೇ ಅಲ್ಲ ನೀನು ಸ್ವತಃ ನಿಂತು ಗದ್ದಲ ಹಾಕಿದರೂ ಅದಕ್ಕೆ ಕೇಳೂದಿಲ್ಲ, ಕೋಲಲ್ಲಿ ತಿವಿದೇ ಅದನ್ನು ಹೊರಗೆ ಕಳಿಸಬೇಕು, ಬಂದ್ಲು ದೊಡದಾಗಿ ರೆಡಿಯೋ ತೊಗೊಂಡು' ಅಂತ ಗದರಿದರು. 'ಅಯ್ಯೋ ನಿಮ್ಮ ಬಳಿ ಆಗದಿದ್ದರೆ ಆ ತಿಮ್ಮಣ್ಣ ಗೌಡನನ್ನಾದರೂ ಕರೆತನ್ನಿ, ಹಾವನ್ನು ಮನೆಯೊಳಗಿಟ್ಟುಕೊಂಡು ನಿಶ್ಚಿಂತೆಯಿಂದ ಮಲಗೂದಾದರೂ ಹೇಗೆ?' ಅಂತ ಅಮ್ಮ ಹೊರಬಂದು ಚಿಂತಾಕ್ರಾಂತಳಾಗಿ ಕೂತಳು.

ಅಪ್ಪ ಅವಳ ಸಲಹೆಗೆ 'ಛೆ, ತಿಮ್ಮಣ್ಣ ಬಂದರೆ ಅದನ್ನು ಬಡಿದು ಸಾಯಿಸಿಯೇ ಹೊರಹಾಕ್ತಾನೆ, ಸುಮ್ಮನಿರು ಅವನಿಗೆ ಮಾತ್ರ ಕರೆಯಲಾರೆ, ಇರು ಕಾಯೋಣ, ಮಳೆ ಕಡಿಮೆಯಾದರೆ ತಾನೇ ಹೊರಹೋಗ್ತದೆ' ಅಂತ ಅಪ್ಪ ಖಡಾಖಂಡಿತವಾಗಿ ಹೇಳಿ, ಅಡುಗೆ ಮನೆಗೆ ನುಗ್ಗಿ ಅನ್ನ ಸಾರಿನ ಪಾತ್ರೆಯನ್ನೂ ಜೊತೆಗೆ ಎಲ್ಲರ ತಟ್ಟೆಗಳನ್ನೂ ಹೊರಖೋಲಿಗೆ ತಂದರು, ದೋಸೆಗೆ ರುಬ್ಬಿದ ಹಿಟ್ಟನ್ನು ಕಲ್ಲು ಗಡಗಡಿಸಿ ಪಾತ್ರೆಗೆ ತೆಗೆದರು, ಆದರೂ ಆ ಕೆರೆ ಹಾವು ಹೊರಹೋಗುವ



ಕಪ್ಪು ಮರಳು ಹರಡಿಕೊಂಡಿರುವ ಕಾರವಾರದ ತೀಳಮಾತಿ ಕಡಲತೀರ...